**D** SL. No. : YYY

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ] | [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

Total No. of Questions : 57 ] | [ Total No. of Printed Pages : 8

**CCE PR**

**Revised & Un-Revised**

**ಸಂಕೇತ ಸಂಖ್ಯೆ : 95-K** | **Code No. : 95-K**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 21. 06. 2018 ] | [ Date : 21. 06. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] | [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] | [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ರಷ್ಯಾದ ಜನತೆಯ ಮೇಲೆ ತಮ್ಮ ಸಿದ್ಧಾಂತದಿಂದ ಪ್ರಭಾವಬೀರಿದ ವ್ಯಕ್ತಿ

   (A) ಸ್ಟ್ಯಾಲಿನ್

   (B) ಕಾರ್ಲ್ ಮಾರ್ಕ್ಸ್

   (C) ರೂಸ್ಸೋ

   (D) ಅಬ್ರಹಂ ಲಿಂಕನ್

2. 1950 ರ ಯೋಜನಾ ನೀತಿಯ ಮುಖ್ಯ ಗುರಿ

   (A) ಆರ್ಥಿಕ ಅಸಮತೋಲನ ಕಡಿಮೆ ಮಾಡುವುದು

   (B) ಸಾಮಾಜಿಕ ಪ್ರಗತಿ ಸಾಧಿಸುವುದು

   (C) ನಿರುದ್ಯೋಗ ಸಮಸ್ಯೆ ನಿರ್ಮೂಲನೆ ಮಾಡುವುದು

   (D) ಜನಸಂಖ್ಯೆ ಬೆಳವಣಿಗೆ ನಿಯಂತ್ರಿಸುವುದು

3. ಬೌದ್ಧ ಧರ್ಮದ ಸ್ಥಾಪಕ

   (A) ಮಹಾವೀರ

   (B) ಗೌತಮ ಬುದ್ಧ

   (C) ಜೀಸಸ್

   (D) ಪೈಗಂಬರ್

4. ಖೇಡಾ ಸತ್ಯಾಗ್ರಹದ ನೇತೃತ್ವ ವಹಿಸಿದ್ದವರು

   (A) ಮಹಾತ್ಮ ಗಾಂಧೀಜಿ

   (B) ಬಾಲಗಂಗಾಧರ್ ತಿಲಕ್

   (C) ಜವಹಾರಲಾಲ್ ನೆಹರು

   (D) ಲಾಲ್ ಬಹುದ್ದೂರ್ ಶಾಸ್ತ್ರಿ

5. 'ರಾಮಕೃಷ್ಣ ಮಿಷನ್' ಸ್ಥಾಪಿಸಿದವರು

(A) ಡಿ.ಕೆ. ಕರ್ವೆ

(B) ಈಶ್ವರ ಚಂದ್ರ ವಿದ್ಯಾಸಾಗರ್

(C) ಸ್ವಾಮಿ ವಿವೇಕಾನಂದ

(D) ಗೋಪಾಲಕೃಷ್ಣ ಗೋಖಲೆ

6. 1916 ರಲ್ಲಿ ಬ್ರಿಟಿಷರು ಆ್ಯನಿಬೆಸೆಂಟ್‌ರವರನ್ನು ಬಂಧಿಸಿದ್ದರು ಏಕೆಂದರೆ, ಅವರು

(A) ವೃತ್ತಪತ್ರಿಕೆಗಳನ್ನು ಆರಂಭಿಸಿದ್ದರು

(B) ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಣ ಮಾಡಿದ್ದರು

(C) ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು

(D) ಹೋಂ ರೂಲ್ ಚಳುವಳಿಯನ್ನು ಆರಂಭಿಸಿದ್ದರು

7. ಬುಟಕಟ್ಟು ಜನರನ್ನು 'ಗಿರಿಜನರು' ಎಂದು ಕರೆದವರು

(A) ಜಿ.ಎಸ್. ಗುರ್ರೆ

(B) ಮಹಾತ್ಮ ಗಾಂಧೀಜಿ

(C) ಎಸ್.ಎಫ್. ನಾಡಲ್

(D) ಬೋಗಾರ್ಡೆಸ್

8. 'ಬೈಗಾ ( Baiga )' ಎಂಬ ಪುಸ್ತಕದ ಲೇಖಕ

(A) ವೆರಿಯರ್ ಎಲ್ವಿನ್

(B) ನಂಜುಂಡಯ್ಯ

(C) ಎಡ್ವರ್ಡ್ ಥರ್‌ಸ್ಟನ್

(D) ಅನಂತಕೃಷ್ಣ ಆಯ್ಯರ್

9. ಬಾಲಗಂಗಾಧರ್ ತಿಲಕರು ಪ್ರಾರಂಭಿಸಿದ ವೃತ್ತಪತ್ರಿಕೆ

(A) ಮೂಕನಾಯಕ

(B) ಹರಿಜನ

(C) ಕೇಸರಿ

(D) ನ್ಯೂ ಇಂಡಿಯಾ

10. ಬೆಂಗಳೂರನ್ನು ಹೀಗೆಂದು ಕರೆಯುವರು

(A) ಭಾರತದ ಸಿಲಿಕಾನ್ ವ್ಯಾಲಿ

(B) ಭಾರತದ ಜಾವಾ

(C) ಭಾರತದ ಮ್ಯಾಂಚೇಸ್ಟರ್

(D) ಭಾರತದ ರೊರ್

II. **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಭಾರತದಲ್ಲಿ ಆರ್ಥಿಕ ಅಸಮತೋಲನ ಹೆಚ್ಚಾಗಲು ಪ್ರಮುಖ ಕಾರಣವೇನು ?

12. ಪ್ರಾದೇಶಿಕ ಅಸಮತೋಲನ ಎಂದರೇನು ?

13. 1954 ರ ವಿಶೇಷ ವಿವಾಹ ಕಾಯ್ದೆಯನ್ನು ಏಕೆ ಜಾರಿಗೆ ತರಲಾಗಿದೆ ?

14. 'ಕಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕದ ಲೇಖಕ ಯಾರು ?

15. ರಾಜಾ ರಾಮ್‌ಮೋಹನ್ ರಾಯ್‌ರವರನ್ನು 'ಭಾರತದ ನವೋದಯ ಪಿತಾಮಹ' ಎಂದು ಏಕೆ ಕರೆಯಲಾಗಿದೆ ?

16. ಪ್ರಾರ್ಥನಾ ಸಮಾಜದ ಪ್ರಾರಂಭದ ಹೆಸರೇನು ?

17. ಸಾಮಾಜಿಕ ಚಳುವಳಿಗಳ ಮುಖ್ಯ ಗುರಿಯೇನು ?

18. ಜ್ಯೋತಿಬಾ ಫುಲೆಯವರು ಸುಧಾರಣಾ ಚಳುವಳಿಯಲ್ಲಿ ಪ್ರಮುಖ ಸ್ಥಾನ ಹೊಂದಿದ್ದಾರೆ. ಏಕೆ ?

19. ಮಹಿಳಾ ಸಬಲೀಕರಣ ಎಂದರೇನು ?

20. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಬ್ಲಾಕ್ ಪದ್ಧತಿಯನ್ನು ಏಕೆ ಅನುಷ್ಠಾನಕ್ಕೆ ತರಲಾಯಿತು ?

21. ಬುಟಕಟ್ಟು ಸಮುದಾಯಗಳಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಏಕೆ ?

22. ಮೊಟ್ಟ ಮೊದಲ ಬುಡಕಟ್ಟು ಆಯೋಗದ ಅಧ್ಯಕ್ಷರು ಯಾರು ?

23. ಸಮೂಹ ಮಾಧ್ಯಮ ಎಂದರೇನು ?

24. ವಯಸ್ಕರ ಶಿಕ್ಷಣ ಎಂದರೇನು ?

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $25 \times 2 = 50$

25. ಆಧುನಿಕರಣದ ಮುಖ್ಯ ಗುರಿಗಳಾವುವು ?

26. ಶಿಕ್ಷಣವು ಸಾಮಾಜಿಕ ಚಲನೆಗೆ ಹೇಗೆ ಪೂರಕವಾಗಿದೆ ?

27. ಸಾಂಪ್ರದಾಯಿಕ ಮನಃಸ್ಥಿತಿ ಸಾಮಾಜಿಕ ಪರಿವರ್ತನೆಗೆ ಅಡ್ಡಿಯಾಗಿದೆ. ಏಕೆ ?

28. ಪಕ್ಕಾ ಮತ್ತು ಕಚ್ಚಾ ಆಹಾರಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

29. ವಿವಾಹದ ಮೇಲಿನ ನಿರ್ಬಂಧವು ಜ್ಯಾತಿ ವ್ಯವಸ್ಥೆಯ ಬುನಾದಿಯಾಗಿದೆ. ಏಕೆ ?

30. ಅಸ್ಪೃಷ್ಯರ ಹಕ್ಕುಗಳನ್ನು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹೇಗೆ ಎತ್ತಿ ಹಿಡಿದಿದ್ದಾರೆ ?

31. ಸ್ವಾಮಿ ದಯಾನಂದ ಸರಸ್ವತಿಯವರು 'ವೇದಗಳಿಗೆ ಹಿಂತಿರುಗಿ' ಎಂದು ಏಕೆ ಕರೆಕೊಟ್ಟರು ?

32. ವಿಕ್ಟರ್ ಬಾಲ್ಡ್‌ರಿಜ್‌ರವರ ಪ್ರಕಾರ ಸಾಮಾಜಿಕ ಚಳುವಳಿಗಳೆಂದರೇನು ?

33. ಮನುಸ್ಮೃತಿಯು ಮಹಿಳೆಯರ ಬಗ್ಗೆ ಗೊಂದಲವನ್ನು ಸೃಷ್ಟಿಸುತ್ತದೆ. ಏಕೆ ?

34. ಡಿ.ಎನ್. ಮುಜುಂದಾರ್‌ರವರ ಪ್ರಕಾರ ಬುಡಕಟ್ಟು ಎಂದರೇನು ?

35. 1980 ರ ಬುಡಕಟ್ಟು ಉಪಯೋಜನೆಯು ಒಳಗೊಂಡಿದ್ದ ಎರಡು ಅಂಶಗಳಾವುವು ?

36. ಸಮೂಹ ಮಾಧ್ಯಮದ ಪ್ರಾಮುಖ್ಯತೆಯೇನು ?

37. ರೇಡಿಯೋ ಆರಂಭದಲ್ಲಿ ಜನಸಾಮಾನ್ಯರನ್ನು ತಲುಪಲು ವಿಫಲವಾಗಿತ್ತು. ಏಕೆ ?

38. ಸಮೂಹ ಮಾಧ್ಯಮಗಳ ಪ್ರಕಾರಗಳನ್ನು ತಿಳಿಸಿ.

39. ಸಮೂಹ ಮಾಧ್ಯಮಗಳು ವಿವಾಹಗಳ ವ್ಯವಸ್ಥೆಯ ಮೇಲೆ ಹೇಗೆ ಪ್ರಭಾವಬೀರಿವೆ ?

40. ಮೊಬೈಲ್ ಫೋನ್‌ಗಳ ಅಭಿವೃದ್ಧಿ ಹೊಂದಿರುವುದರಿಂದಾಗುವ ಅನುಕೂಲಗಳೇನು ?

41. ಯುದ್ಧಗಳ ಸಂದರ್ಭಗಳಲ್ಲಿ ರೇಡಿಯೊ ಪ್ರಮುಖ ಪಾತ್ರವಹಿಸಿದ್ದವು ಹೇಗೆ ?

42. ನೆಹರೂರವರು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗ ಹೇಗೆ ಶ್ರಮಿಸಿದ್ದರು ?

43. 'ಜಾತಿ' ಎಂಬ ಪದವು ಹೇಗೆ ಉಗಮವಾಗಿದೆ ?

44. ಗ್ರಾಮೀಣ ಮಹಿಳೆಯರ ಪ್ರಮುಖ ಸಮಸ್ಯೆಗಳಾವುವು ?

45. ಭಾರತದ ಮುಸ್ಲಿಂ ಆಳ್ವಿಕೆಯಲ್ಲಿ ಮಹಿಳೆಯರ ಸ್ಥಾನಮಾನ ಹೇಗಿತ್ತು ?

46. ನಗರೀಕರಣಕ್ಕೆ ಪ್ರಚೋದನೆ ನೀಡುವ ಅಂಶಗಳಾವುವು ?

47. ಪ್ರಗತಿ ಮತ್ತು ಸಾಮಾಜಿಕ ಬದಲಾವಣೆಯ ವಿಳಂಬಕ್ಕೆ ಕಾರಣಗಳೇನು ?

48. ನಗರೀಕರಣ ಮತ್ತು ಜಾತಿ ವ್ಯವಸ್ಥೆಯ ನಡುವಿನ ಸಂಬಂಧವೇನು ?

49. ಪ್ರಾರ್ಥನಾ ಸಮಾಜದ ಸದಸ್ಯರನ್ನು ಹೆಸರಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ *ಮೂರರಿಂದ* ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

50. ಕೈಗಾರಿಕೀಕರಣದ ಪರಿಣಾಮಗಳೇನು ?

***ಅಥವಾ***

ಅನಕ್ಷರತೆಯು ಸಾಮಾಜಿಕ ಬದಲಾವಣೆಗೆ ಹೇಗೆ ಅಡ್ಡಿಯಾಗಿದೆ ಎಂದು ವಿವರಿಸಿ.

51. ವಿಜ್ಞಾನ ಮತ್ತು ತಂತ್ರಜ್ಞಾನವು ಮಾನವನ ಸಾಮಾಜಿಕ ಬದಲಾವಣೆಯಲ್ಲಿ ಮುಖ್ಯ ಪಾತ್ರವಹಿಸುತ್ತಿವೆ. ಸಮರ್ಥಿಸಿ.

***ಅಥವಾ***

ಜಾಗತೀಕರಣದಿಂದಾಗಿ ಪ್ರಾದೇಶಿಕ ಅಸಮತೋಲನವು ಹೆಚ್ಚಾಗುತ್ತಿದೆ. ಸಮರ್ಥಿಸಿ.

52. ಜಾತಿ ವ್ಯವಸ್ಥೆಯ ಅಧ್ಯಯನ ಮಾಡದೆ ಹೋದರೆ ಭಾರತೀಯ ಸಮಾಜದ ಅಧ್ಯಯನವು ಅಪೂರ್ಣವಾಗುತ್ತದೆ. ಏಕೆ ?

***ಅಥವಾ***

ಪ್ರತಿಭಟನಾ ಚಳುವಳಿಗಳು ಕಾಲಾಂತರದಲ್ಲಿ ರೂಪುಗೊಳ್ಳುತ್ತವೆ. ಏಕೆ ?

53. ಜಾತಿ ವ್ಯವಸ್ಥೆಯ ವಿರುದ್ಧವಾಗಿ ಹೋರಾಟ ಮಾಡಿದ ಭಾರತೀಯ ಸಮಾಜ ಸುಧಾರಕರನ್ನು ಹೆಸರಿಸಿ.

***ಅಥವಾ***

ಸಾಮಾಜಿಕ ಚಳುವಳಿಯ ಉದ್ದೇಶಗಳನ್ನು ತಿಳಿಸಿ.

54. ಮಹಿಳೆಯರ ಜಾಗೃತಿ ಹಾಗೂ ಪ್ರಗತಿಗಾಗಿ ಬ್ರಿಟಿಷರ ಕಾಲದಲ್ಲಿ ಮಹತ್ವದ ಪಾತ್ರವಹಿಸಿದ ಮಹಿಳಾ ಸಂಘಟನೆಗಳನ್ನು ಹೆಸರಿಸಿ.

***ಅಥವಾ***

1996 ರ ಕೇಂದ್ರ ಸರ್ಕಾರದ ಎರಡನೇ ಅನುಸೂಚಿತ ಪ್ರದೇಶ ಮತ್ತು ಬುಡಕಟ್ಟುಗಳ ಆಯೋಗದ ಉದ್ದೇಶಗಳೇನಾಗಿದ್ದವು ?

55. ಬ್ರಿಟಿಷರು ತಮ್ಮ ಆಳ್ವಿಕೆಯ ಕಾಲದಲ್ಲಿ ಕೆಲವು ಸಾಮಾಜಿಕ ಶಾಸನಗಳನ್ನು ಭಾರತದಲ್ಲಿ ಏಕೆ ಜಾರಿಗೆ ತಂದರು ?

***ಅಥವಾ***

ಬುಡಕಟ್ಟು ಧರ್ಮದ ಕಲೆ ಸಂಸ್ಕೃತಿ ಮತ್ತು ಶ್ರೀಮಂತ ಪರಂಪರೆಯನ್ನು ಸಂರಕ್ಷಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಏಕೆ ?

V. **ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

56. ಸಾಮಾಜಿಕ ಬದಲಾವಣೆಯ ಲಕ್ಷಣಗಳನ್ನು ತಿಳಿಸಿ.

57. ಸ್ವಾತಂತ್ರ್ಯ ನಂತರದ ಭಾರತದಲ್ಲಿ ಮಹಿಳೆಯರ ಸ್ಥಾನಮಾನವನ್ನು ಹೇಗೆ ಉತ್ತಮಗೊಳಿಸಲಾಗಿದೆ. ವಿವರಿಸಿ.